# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 71 (ಹಳೇ ಸಂಖ್ಯೆ33) ಚಾಮುಂಡಿ ನಗರ

ಸಂಖ್ಯೆ: ಸ.ಅ/ವಾ-71/ಪಿ.ಆರ್/35/2022-23 ದಿನಾಂಕ:-17-09-2022

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-17-09-2022 ರಂದು ವಾರ್ಡ್ ನಂ:71 (ಹಳೇ ಸಂಖ್ಯೆ-33) ಚಾಮುಂಡಿ ನಗರ , ವಾರ್ಡ್ ಸಮಿತಿ ಸಭೆಯ ನಡವಳಿಗಳು.

**:: ಸಭೆಗೆ ಹಾಜರಾಗಿದ್ದವರ ವಿವರಗಳು ::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ. ಅಶೋಕ್ ಹಿಂದಾ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀಮತಿ.ಪುಷ್ಪ.ಸಿ.ಸಂಗನಾಳ | ಸಹಾಯಕ ಅಭಿಯಂತರರು ವಾಡ್ ನಂ: 71 (ಹಳೇ ಸಂಖ್ಯೆ-33) |
| 3. | ಶ್ರೀಮತಿ ಅನೀಸ್ ಫಾತೀಮಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ. ನಾಗೇಂದ್ರ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀ. ಚಿರಂಜೀವಿ | ಸಾರ್ವಜನಿಕರು |
| 6. | ಶ್ರೀ. ನಿಂಗಯ್ಯ | ಸಾರ್ವಜನಿಕರು |
| 7. | ಶ್ರೀ. ಬಸವರಾಜ್.ಎನ್ | ಸಾರ್ವಜನಿಕರು |
| 8. | ಶ್ರೀ. ಕಾಶಪ್ಪ | ಸಾರ್ವಜನಿಕರು |
| 9. | ಶ್ರೀ. ಎ. ಹರಿ | ಸಾರ್ವಜನಿಕರು |
| 10. | ಶ್ರೀ. ಮನೀತ್ | ಸಾರ್ವಜನಿಕರು |
| 11. | ಶ್ರೀ. ಚರಣ್.ಎಸ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಅಶೋಕ್ ಹಿಂದಾ ಮತ್ತು ಕಾರ್ಯದರ್ಶಿ, ಸಹಾಯಕ ಅಭಿಯಂತರರಾದ ಶ್ರೀಮತಿ.ಪುಷ್ಪ.ಸಿ.ಸಂಗನಾಳ ರವರು ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ಥಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ-71 (ಹಳೆ ಸಂಖ್ಯೆ-33) ರವರು ಹಿಂದಿನ ಸಭೆಯಲ್ಲಿ ನಡೆದಂತಹ ವಿಷಯಗಳ ಹಾಗೂ ದೂರುಗಳ ಕುರಿತು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು.

**ಘನತ್ಯಾಜ್ಯ:-**

1. ಚೈತನ್ಯ ಆಸ್ಪತ್ರೆಯ ಬಳಿ ಬಿದ್ದಿರುವ ಕಸವನ್ನು ವಿಲೇವಾರಿ ಮಾಡಲಾಗಿರುತ್ತದೆ.
2. ಚಾಮುಂಡೇಶ್ವರಿ ದೇವಸ್ಥಾನದ ಬಳಿ ಬಿದ್ದಿರುವ ಕಸವನ್ನು ವಿಲೇವಾರಿ ಮಾಡಲಾಗಿರುತ್ತದೆ.

**ಕಾಮಗಾರಿ ಇಲಾಖೆ:**

1. ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆ ಪಕ್ಕದ ಮಳೆನೀರು ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನ ತೆಗೆಯುವ ಕಾಮಗಾರಿ ಪ್ರಗತಿಯಲ್ಲಿದೆ.
2. ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಪ್ರಗತಿಯಲ್ಲಿದೆ.

Scanned with OKEN Scanner

**ಆರೋಗ್ಯ ಇಲಾಖೆ:-**

1. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ನಿರೋದಕ ಔಷಧಿಯನ್ನು ಸಿಂಪಡಣೆ ಮಾಡಲಾಗುತ್ತಿರುತ್ತದೆ.
2. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿರುವ ತಳ್ಳುವ ಗಾಡಿ ವ್ಯಾಪಾರಸ್ಥರು ಪ್ಲಾಸ್ಟಿಕ್ ಕೈಚೀಲಗಳನ್ನು ಮಾರಾಟ ಮಾಡುತ್ತಿರುವವರ ವಿರುದ್ಧ ಮಾರ್ಷಲ್ ರವರು ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ.

**ದಿನಾಂಕ:-17-09-2022 ರಂದು ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು**

**ಕಾಮಗಾರಿ ಇಲಾಖೆ:**

1. ವಾರ್ಡ್ ವ್ಯಾಪ್ತಿಯಲ್ಲಿರುವ ಮಂಜುನಾಥ ಬಡಾವಣೆ, ಸೀತಪ್ಪ ಬಡಾವಣೆ, ಅಪ್ಪಣ್ಣ ಬ್ಲಾಕ್, ಚಾಮುಂಡಿನಗರ ರಸ್ತೆಯ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನ ತೆಗೆಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
2. ವಾರ್ಡ್‌ನ ರಸ್ತೆಯ ಪಕ್ಕದ ಚರಂಡಿಗಳಲ್ಲಿ ಹೂಳನ್ನು ತೆಗೆದು ಒಡೆದು ಹೋಗಿರುವ ಸ್ಲಾಬ್‌ಗಳನ್ನು ಸರಿಪಡಿಸಲು ಸೂಚಿಸಲಾಯಿತು.

**ಆರೋಗ್ಯ ಇಲಾಖೆ:-**

1. ಕೌಸರ್‌ನಗರದ ಸರ್ಕಾರಿ ಶಾಲೆಯ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ಸೊಳ್ಳೆ ನಿರೋದಕ ಔಷಧಿಯನ್ನು ಸಿಂಪಡಣೆ ಮಾಡುವಂತೆ ಆರೋಗ್ಯ ಇಲಾಖೆಯ ಅದಿಕಾರಿಗಳಿಗೆ ಸೂಚಿಸಲಾಯಿತು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿ ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 71 ಚಾಮುಂಡಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 71 ಚಾಮುಂಡಿನಗರ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
5. ಕಛೇರಿ ಕಡತಕ್ಕೆ.

Scanned with OKEN Scanner